ರಾಜ್ಯದಲ್ಲಿ ಉಚಿತ ಕಾನೂನು ನೆರವು

೧೮೮೮ ಶ್ರೀ ಜಿ. ರಾಜೂಗೌಡ (ಹತ್ತೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆವಿಗೆ ಉಚಿತ ಕಾನೂನು ನೆರವು ಕೋರಿ ಎಷ್ಟು ಅರ್ಜಿಗಳು ಬಂದಿವೆ,

ಆ) ಈ ಪೈಕಿ ಎಷ್ಟು ಅರ್ಜಿದಾರರಿಗೆ ಉಚಿತ ಕಾನೂನು ನೆರವು ಸಿಕ್ಕಿದೆ,

ಇ) ಎಷ್ಟು ಮೊಕದ್ದಮೆಗಳಲ್ಲಿ ಉಚಿತ ಕಾನೂನು ನೆರವಿನಿಂದ ಇವರಿಗೆ ಕೇಸಿನ ತೀರ್ಪು ಅನುಕೂಲವಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ೧೬,೦೬೦

ಆ) ೯,೨೭೩

ಇ) ಅರ್ಜಿದಾರರ ಪರವಾಗಿ ೧,೬೦೭.

ಅರ್ಜಿದಾರರ ವಿರುದ್ಧವಾಗಿ ೩೬೦

ಮುಳಬಾಗಿಲಿನಲ್ಲಿ ಕೆ: ಎಸ್. ಆರ್. ಟಿ, ಸಿ. ಬಸ್ ನಿಲ್ದಾಣದ ಬಗ್ಗೆ

೧೮೮೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ,

ಆ) ಹಾಗಿದ್ದಲ್ಲಿ ಈ ವಿಭಾಗವನ್ನು ಎಂದು ತೆರೆಯಲಾಗುವುದು,

ಇ) ಮುಳಬಾಗಿಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವನು ಅಭಿವೃದ್ಧಿಗೊಳಿಸುವುದು ಸರ್ಕಾರದ ಗಮನದಲ್ಲಿದೆಯೇ,

ಈ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಎಂದು ಕಾರ್ಯಾರಂಭ ಮಾಡುವಿರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ)ಇಲ್ಲ.

ಆ) ಉದ್ಭವಿಸುವುದಿಲ್ಲ,

ಇ) ಮುಳಬಾಗಲಿನಲ್ಲಿಯು ಬಸ್ ನಿಲ್ದಾಣವು ಪುರಸಭೆಯ ಅಧೀನದಲ್ಲಿದೆ.

ಈ) ಉದ್ಭವಿಸುವುದಿಲ್ಲ.

ಖಾಸಗಿ ಬಸ್ಸುಗಳ ರಾಷ್ಟ್ರೀಕರಣ ಮಾಡುವ ಬಗ್ಗೆ

೧೮೯೪ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪೂರ್ಣವಾಗಿ ಖಾಸಗೀ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶ ವಿದೆಯೇ ?

ಆ) ಪೂರ್ಣವಾಗಿ ರಾಷ್ಟ್ರೀಕರಣ ಮಾಡದೆ ಇರಲು ಕಾರಣ ಮತ್ತು ಹೊಂದರೆ ಏನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿ ಮತ್ತು ವಸತಿ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ವಿವಿಧ ಕ್ಷೇತ್ರಗಳ ಬೆಳವಣಿಗೆ ಮತ್ತು ದೊರೆಯುವ ಮೂಲ ಸಂಪತ್ತನ್ನು ಅವಲಂಬಿಸಿ, ಸರ್ಕಾರವು ಹಂತಹಂತವಾಗಿ ರಾಷ್ಟ್ರೀಕರಣ ಮಾಡುವ ಯೋಜನೆಯ ನೀತಿಯನ್ನು ಅನುಸರಿಸುತ್ತಿದೆ.

ಶಿವಮೊಗ್ಗದಲ್ಲಿರುವ ಸರಕಾರಿ ಗಂಧದ ಎಣ್ಣೆ ಕಾರ್ಖಾನೆ ವಿಸ್ತರಣೆಯ ಬಗ್ಗೆ

೮೪೦ ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ),—ಮಾನ್ಯ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗದಲ್ಲಿ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಯ ವಿಸ್ತರಣೆಗಾಗಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಆ) ಯಂತ್ರೋಪಕರಣಗಳ ಖರೀದಿಗಾಗಿ ವಿನಿಯೋಗಿಸಿರುವ ಮೊಬಲಗೆಷ್ಟು ?

ಇ) ಯಾವ ಆಧಾರದ ಮೇಲೆ ಮೇಲ್ಕಂಡ ಯಂತ್ರಗಳನ್ನು ಖರೀದಿಸಲಾಗಿದೆ ?

ಶ್ರೀ ಜೆ. ಹೆಚ್. ಪಟೀಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕೆ ಮಂತ್ರಿಗಳು).—

ಅ) ಈ ಕಾರ್ಖಾನೆಯ ವಿಸ್ತರಣೆಗಾಗಿ ಕಳೆದ ಎರಡು ವರ್ಷಗಳಿಂದ ಯಾವ ಕ್ರಮವನ್ನು ಸರ್ಕಾರವು ಕೈಗೊಂಡಿಲ್ಲ.

ಆ) ಇ) ಮತ್ತು ಮೇಲೆ ಹೇಳಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಲಾರಿಯಲ್ಲಿ ಪ್ರಯಾಣಿಸುವ ಜನರಿಗೆ ಸೀಟು ಶುಲ್ಕ ವಿಧಿಸುವ ಬಗ್ಗೆ

೮೪೧ ಶ್ರೀ ಸಿ. ಎಂ. ಉದಾಸಿ (ಹಾನಗಲ್ಲ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲಾರಿಯ ಕ್ಯಾಬಿನ್‌ನಲ್ಲಿ ಮಿತಿಗಿಂತಲೂ ಹೆಚ್ಚಿಗೆ ಪ್ರಯಾಣಿಕರು ಪ್ರಯಾಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ನಿಯಂತ್ರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು?

ಇ) ಕ್ಯಾಬಿನ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚಿಗೆ ಜನ ಕೂಡಲು ಅವಕಾಶವಿದ್ದರೂ ಸರ್ಕಾರದವರು ಏಕೆ ಅನುಮತಿ ನೀಡಲಿಲ್ಲ ?

ಈ) ಇದರಿಂದ ಸರ್ಕಾರಕ್ಕೆ ಬರುವ ಆದಾಯದಲ್ಲಿ ಕಡಿಮೆಯಾದಂತಾಗುವುದಿಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಹೌದು.

(ಕೆಲವು ಲಾರಿಗಳಲ್ಲಿ ಮಾತ್ರ)

ಆ) ಕೇಸುಗಳನ್ನು ದಾಖಲು ಮಾಡಿ ಹಾಗೂ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಕರ್ನಾಟಕ ಮೋಟಾರು ವಾಹನಗಳ ನಿಯಮ ೧೯೬೩ರ ನಿಯಮ ೧೬೧ರ ಪ್ರಕಾರ ಲಾರಿಗಳಲ್ಲಿ ಪ್ರಯಾಣಿಕರನ್ನು ಸಾಗಿಸಲು ಅವಕಾಶವಿಲ್ಲ,

ಈ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ,